# ವಿಮರ್ಶಕ

'ವಿಮರ್ಶೆ' ಎನ್ನುವ ಪದದ ಪದಶಃ ಅರ್ಥವೆಂದರೆ ಕೈಯಿಂದ ಮುಟ್ಟುವುದು ಎಂದು. 'ವಿಮರ್ಶ–ಪಾಣಿನಾ' ಎಂದು ಪ್ರಯೋಗವಿದೆ. ಮುಟ್ಟುವುದು, ತಡವುವುದು, ನೇವರಿಸುವುದು ಇತ್ಯಾದಿ ಸ್ಪರ್ಶಕ್ರಿಯೆಗಳ ಮೂಲಕ ಅರಿವನ್ನು ಪಡೆಯುವುದೇ– ವಿಮರ್ಶೆ. ಅಂದರೆ ಮೂಲತಃ ಸ್ಪರ್ಶೇಂದ್ರಿಯಾನುಭವ. ಅಂದರೆ ಮೈಯ ಅರಿವನ್ನು ಪಡೆಯುವ ಅನುಭವ. ಇದು ಬದುಕಿನಲ್ಲಿ ಮೂಲಭೂತವಾದುದೆನಿಸುತ್ತದೆ. ತಾಯಿ–ಮಗುವಿನ ಸಂಬಂಧದಲ್ಲಿ ಈ ಸ್ಪರ್ಶಗುಣವೇ ಪರಮ ವಾತ್ಸಲ್ಯದ ಅಭಿವ್ಯಕ್ತಿಯಾಗಿದೆ. 'ವತ್ಸ' ಎಂದರೆ ಕರು. ವಾತ್ಸಲ್ಯ ಎಂದರೆ– ಆಗ ತಾನೇ ತನ್ನೊಡಲಿಂದ ಹೊರಬಂದ ತನ್ನ ಕರುವನ್ನು, ಅದರ ಮೈಯ್ಯನ್ನು ತಾಯಿ ಹಸು ನೆಕ್ಕುತ್ತ ನೆಕ್ಕುತ್ತ ಕರುವನ್ನು ಗಟ್ಟಿ ಗೊಳಿಸುವುದು. ತಾಯ ನೆಕ್ಕುವ ಪ್ರೀತಿ ಸಿಕ್ಕದೆ ಕರು ಎದ್ದು ನಿಲ್ಲದು. ಎದ್ದು ನಿಲ್ಲದೆ ತಾಯ ಮೊಲೆಹಾಲು ಕುಡಿಯದು. ಕುಡಿಯದೆ ತಾಯ ಕೆಚ್ಚಲ ಭಾರ ಇಳಿಯದು ಮತ್ತು ಹಾಲು ಕುಡಿಯದೆ ಕರು ಬದುಕದು. ಈ ಎಲ್ಲವೂ ಕರುವಿನ ಮೈ ನೆಕ್ಕುವುದರಿಂದ. ತಾಯಿ ತನ್ನ ಮೈ ನೆಕ್ಕದೆ ತನ್ನೊಡಲಿನ ಅರಿವು ಕರುವಿಗೂ ಆಗದು. ಇದು ವಾತ್ಸಲ್ಯ! ಈ ವಾತ್ಸಲ್ಯದ ಮೂಲದಲ್ಲಿರುವುದು ವಿಮರ್ಶೆಯ ಗುಣ! ಅಂದರೆ ಒಡಲನ್ನು ಮುಟ್ಟಿ ಮುಟ್ಟಿ ನೋಡುವ ಗುಣ. ನಾಲಗೆಯಿಂದ ಮುಟ್ಟುವುದು ಪ್ರೀತಿಯ ಪರಾಕಾಷ್ಠೆಯಲ್ಲವೆ!

ಈ ಮುಟ್ಟಿ ಅರಿಯುವ ಕ್ರಿಯೆಯನ್ನೇ ನಾವು ಇನ್ನಷ್ಟು ವಿಸ್ತಾರಕ್ಕೆ, ಆಳಕ್ಕೆ ಬೆಳೆಸುವೆವು. ಇನ್ನೊಂದು ಆಯಾಮಕ್ಕೆ ಬೆಳೆಸುವೆವು. ನಾಡಿಯನ್ನು ಮುಟ್ಟುವೆವು. ಮುಟ್ಟಿ, ನಾಡಿಯ ಮಿಡಿತವನ್ನು ತಿಳಿಯುವೆವು. ಮಿಡಿತವನ್ನು ತಿಳಿದರೆ ಆಗ ಮೈಯನ್ನು ಮಾತ್ರವಲ್ಲ– ಮನಸ್ಸನ್ನೇ ಮುಟ್ಟಿದಂತೆ!

'ಮುಟ್ಟುವುದು' ಎನ್ನುವ ಕ್ರಿಯಾಪದವನ್ನೇ 'ಮನಮುಟ್ಟಿತು' ಎನ್ನುವಲ್ಲಿಯೂ ಬಳಸುವೆವು! ಹೌದು. ಮನಸ್ಸನ್ನೇ ಮುಟ್ಟಬಹುದಂತೆ. ಗಾಳಿಗಿಂತ ಚಂಚಲವಾದ ಬಾನಿಗಿಂತ ಬಿನ್ನಾಣದ ಮನಸ್ಸೆಂಬ ಮನಸ್ಸನ್ನೇ ಮುಟ್ಟಲಾಗುವುದಂತೆ! ನಾಡಿಯ ಮಿಡಿತಕ್ಕೆ ಸ್ಪಂದಿಸಿದರೆ ಅದು ಮನಸ್ಸನ್ನೇ ಮುಟ್ಟಿದಂತಲ್ಲವೆ! ಬೇಂದ್ರೆ ತಮ್ಮೊಂದು ಕವಿತೆಯಲ್ಲಿ 'ಮೈಯುನೀನು' ಎಂದು ಪ್ರಾರಂಭಿಸಿ ಕೂಡಲೇ 'ನೀ ಮಿಡುಕ' ಎಂದು ಮುಂದುವರಿಸುತ್ತಾರೆ. 'ಮಿಡುಕ' ಎಂದರೆ ಮಿಡಿತ ಎಂದೇ ಅರ್ಥ. ವೈಯ್ಯ ಮೂಲಕ ಮನಸ್ಸನ್ನು ಮುಟ್ಟಲಾಗದಿದ್ದರೆ– ಅದು ಮುಟ್ಟಿದರೂ ಮುಟ್ಟಿದಂತಲ್ಲ. ನಾಡಿಯ ಮಿಡಿತದ ಮೂಲಕ ಮೈ–ಮನಗಳ ಸ್ವಾಸ್ಥ್ಯವನ್ನು ತಿಳಿಯಲಾಗದಿದ್ದರೆ ಅದು ಮುಟ್ಟಿದರೂ ಮುಟ್ಟಿದಂತಲ್ಲ. ಮುಟ್ಟಿದರೂ ಮುಟ್ಟಿದಂತಲ್ಲ ಎಂಬ ಅವಸ್ಥೆಯು ವಿಮರ್ಶೆಯ ದುರವಸ್ಥೆಯೇ ನಿಜ.

ಮಿಡಿಯುವುದು ಎಂದರೆ ಪ್ರತಿ ಸ್ಪಂದಿಸುವುದು ಎಂದೂ ಅರ್ಥ. ಅಂದರೆ ನಾಡಿಯ ಮಿಡಿತವನ್ನು ಕೇಳುತ್ತ ರೋಗಿಯ ಸ್ವಾಸ್ಥ್ಯವನ್ನು ಅರಿಯುವ ಪ್ರಕ್ರಿಯೆಯಲ್ಲಿ ತನ್ನನ್ನು ಅರಿಯುವ ಪ್ರಕ್ರಿಯೆಯೂ ಅಡಗಿರುತ್ತದೆ! ತನ್ನ ಅರಿವನ್ನೇ ಒರೆಗೆ ಹಚ್ಚುತ್ತಿರುವ ಪ್ರಕ್ರಿಯೆಯೂ ಅಡಗಿರುತ್ತದೆ! ರೋಗಿಯ ನಾಡಿಯನ್ನು ಹಿಡಿದು ಮಿಡಿತವನ್ನು ಕೇಳುತ್ತ ಕಣ್ಣುಮುಚ್ಚಿ ತನ್ನೊಳಗೆ ಚಿಂತಿತನಾದ ವೈದ್ಯನ ನಾಡಿಯ ಮಿಡಿತವೂ– ಇವೆರಡೂ ಒಂದೇ ಲಯದಲ್ಲಿ ಮಿಡಿಯುತ್ತಿರಬಹುದು ಎನ್ನಿಸುತ್ತದೆ. ಮಗುವನ್ನು ಎದೆಗವಚಿಕೊಂಡಾಗ– ಮಗು ಮತ್ತು ತಾಯಿ– ಇಬ್ಬರ ಎದೆ ಬಡಿತವೂ ಒಂದೇ 'ಲಯ'ದಲ್ಲಿ ಇರುತ್ತದೆ– ಎನ್ನಲಾಗಿದೆ. ನಾನಿದನ್ನು ನಂಬುವೆ. ಮಿಡಿತ ಎಂದರೆ ಪ್ರತಿ ಸ್ಪಂದನ ಎಂದಿರುವುದು ಹುಸಿಯಾಗಿರಲಾರದು.

ಭಾರತೀಯ ಸಂದರ್ಭದಲ್ಲಿ ನಾವು 'ಕವಿ–ಸಹೃದಯ' ಎನ್ನುವ ಪರಿಕಲ್ಪನೆಗಳನ್ನು ಬಳಸುವೆವು. ಸಹೃದಯನೆಂದರೆ ಕವಿಯ ಮಿಡಿತದೊಂದಿಗೆ ತಾನೂ ಮಿಡಿಯಬಲ್ಲವನು; ಕವಿಗೆ ಪ್ರತಿಸ್ಪಂದಿಸುವ ಜೀವ, ಕವಿಯನ್ನು ಅರ್ಥಮಾಡಿಕೊಂಡ, ಮಾಡಿಕೊಳ್ಳ ಬಲ್ಲ ಜೀವ ಎಂದು ಅರ್ಥ. ಸಹೃದಯನೇ ವಿಮರ್ಶಕ. ಸಹೃದಯನಲ್ಲದವನು ವಿಮರ್ಶಕನಾಗಲಾರ. ಇವೆಲ್ಲ ನಿಜ. ಆದರೆ ಇಂಥ ನಿಲುವುಗಳು ತೀರ ಸರಳೀಕೃತವಾದಾಗ ಕಾವ್ಯ ಸಂಸ್ಕೃತಿಗೇ ಅಪಾಯ ತಪ್ಪಿದ್ದಲ್ಲ. ಪರಸ್ಪರ ಸ್ಪಂದನದಲ್ಲಿ ಪರಸ್ಪರರ ಶಕ್ತಿ ತಿಳಿದು ಬಂದಂತೆ ದೌರ್ಬಲ್ಯಗಳೂ ತಿಳಿದುಬರಬೇಕಲ್ಲವೆ? ತಿಳಿದು ಬಂದೇ ಬರುತ್ತದೆಯಲ್ಲವೆ? ಗುಣಜ್ಞತೆಯಂತೆ ದೋಷಜ್ಞತೆಯೂ ಮುಖ್ಯವಲ್ಲವೆ? ತನ್ನ ದೋಷವನ್ನು ತಿಳಿಸುವವರೂ ಸಹೃದಯರಲ್ಲವೆ? ಅವರೇ ನಿಜವಾದ ಸಹೃದಯರಲ್ಲವೆ? ನಿಜವಾದ ಪರೀಕ್ಷೆಯೊಂದಕ್ಕೆ ಒಡ್ಡಿಕೊಳ್ಳದೆ ಕಾವ್ಯ ವ್ಯಕ್ತಿತ್ವವು– ಬೇಂದ್ರೆಯವರ ಭಾಷೆಯಲ್ಲಿ ಹೇಳುವುದಾದರೆ ಕಾವ್ಯ ಚಾರಿತ್ರ್ಯವು ಪುಟಗೊಳ್ಳುವುದು ಸಾಧ್ಯವೆ? ಸಹೃದಯನನ್ನು ಹಂಬಲಿಸುವುದು ಹೇಗೆ ಸಹಜವೋ ಈ ಪುಟಗೊಳ್ಳುವಿಕೆಯನ್ನು ಹಂಬಲಿಸುವುದೂ ಅದಕ್ಕಿಂತಲೂ ಸಹಜವಲ್ಲವೆ?

ಇಲ್ಲಿದೆ: ಗೋಪಾಲಕೃಷ್ಣ ಅಡಿಗರ 'ವಿಮರ್ಶಕ' ಕವಿತೆಯ ಕೆಲವು ಮಾರ್ಮಿಕ ಸಾಲುಗಳು

'ನಾನೇರುವೆತ್ತರಕ್ಕೆ ನೀನು ಕೂಡಾ ಏರಿ ನೆಳಲಂತೆ
ನಾನಿಳಿಯುವಾಳಕ್ಕು ನುಸುಳಿ ನುಗ್ಗಿ
ದಿಗಂತದೆಡೆಗೆ ನಾ ಬಿಚ್ಚಿದ್ದ ರೆಕ್ಕಗೆ ರೆಕ್ಕೆ
ಹಚ್ಚಿ ಹೊಸದಿಗಂತಗಳನ್ನು ಪತ್ತೆ ಹಚ್ಚಿ
ಏನನ್ನು ಮುಟ್ಟದೆಯೆ ನಿಂತೆ ನಿಸ್ಪೃಹನಾಗಿ ಕೆಳಕ್ಕೆ
ಮೇಲಕ್ಕೆ ಸುತ್ತಮುತ್ತ:
ಒಳಗಣ್ಣಿನಲ್ಲೋಲದಲ್ಲಿ ಮೂಡುವ ನೀನು
ಹೊರಗಿನವನಂತು ಅಲ್ಲ. ನನ್ನೊಳಗಿನವ
ಒರೆಗಿಕ್ಕುವ, ಸಾಣೆ ಹಿಡಿವ, ತೂಗುವ, ಅಳೆವ,
ಕಾರುಬಾರೆಲ್ಲವೂ ನಿನ್ನದೇ. ನಿದ್ದೆಮಂಪರಿನಲ್ಲಿ
ಸೂಜಿ ಚುಚ್ಚಿ ಎಬ್ಬರಿಸಿದವ....
ಭಾವ ಬದ್ಧ ಪಶು ತೊಂಡುಮೇಯಲು ಬಿಡದ
ಪಶ್ಚಾತ್ತಾಪಕ್ಕೆ ಸರ್ವದಾ ತಿವಿಯುತ್ತ
ಪಾಪ ಪುಣ್ಯಗಳ ಕತ್ತರಿಯಲ್ಲಿ ಸಿಕ್ಕಿಸಿ ಒತ್ತುತ್ತ ಒತ್ತುತ್ತ
ಪಶ್ಚಾತ್ತಾಪ ದುರಿಗಿಕ್ಕಿ ಸುಟ್ಟವನೆ, ಸುಡುಗಾಡವನೆ,
ನನ್ನ ವಿಗ್ರಹ ಮುಕ್ಕು ಮಾಡಿ ತದನಂತರವೆ ಬೀದಿಗೆಳೆದವನೆ
ಕೊಂದವನೆ, ಕೊಂದು ಬದುಕಿಸಿದವನೆ,
ಜನ್ಮಶನಿಯೇ, ಜಿಗಣೆ ಗೆಣೆಯ, ಗುರುವೇ.'

ಮುಟ್ಟದೆ ಪ್ರೀತಿ ಇಲ್ಲ. ಮುಟ್ಟದೆ ಜಗಳವಿಲ್ಲ. ಮುಟ್ಟದೆ ನಾಕ–ನರಕಗಳಿಲ್ಲ. ಮುಟ್ಟದೆ ಕೈವಲ್ಯವೂ ಇಲ್ಲ. ಸಂಬಂಧದ ಎಲ್ಲ ಎಳೆಗಳೂ ಮುಟ್ಟಿದವನೊಡನೆ ಮಾತ್ರ.

■ ತೋಷ

## ಮಾತೇ ಮುತ್ತು

★ ನಕಲು ಮಾಡಿ ಗೆಲ್ಲುವುದಕ್ಕಿಂತ ಸ್ವಂತ ಸೃಷ್ಟಿಯಲ್ಲಿ ಸೋಲುವುದು ಒಳ್ಳೆಯದು.
–ಹರ್ಮನ್ ಮೆಲ್ವಿಲ್

★ ಇತರರ ಬಗ್ಗೆ ಹೆಚ್ಚು ಗೊತ್ತಿರುವವನು ಬುದ್ಧಿವಂತ. ಆದರೆ ತನ್ನ ಬಗ್ಗೆಯೇ ಹೆಚ್ಚು ಗೊತ್ತಿರುವವನು ಜ್ಞಾನಿ.
–ಲಾವೊ ತ್ಸೆ

★ ಕಾಲು ಜಾರಿದರೆ ಎದ್ದು ನಿಲ್ಲಬಹುದು. ನಾಲಗೆ ಜಾರಿದರೆ ಎದ್ದು ನಿಲ್ಲುವುದು ಕಷ್ಟ.
–ಬೆಂಜಮಿನ್ ಫ್ರಾಂಕ್ಲಿನ್

★ ನೀವು ಯಶಸ್ಸು ಹೊಂದಬೇಕೆಂದು ದೇವರು ಬಯಸುವುದಿಲ್ಲ; ಆದರೆ ನೀವು ಪ್ರಯತ್ನಿಸಬೇಕೆಂದು ಬಯಸುತ್ತಾನೆ.
–ಮದರ್ ತೆರೆಸಾ

★ ನಿಮ್ಮ ದುರದೃಷ್ಟದಿಂದ ಕಲಿತುಕೊಳ್ಳುವುದಕ್ಕಿಂತ ಇತರರ ದುರದೃಷ್ಟದಿಂದ ಕಲಿತುಕೊಳ್ಳುವುದು ಒಳ್ಳೆಯದು.
–ಈಸೋಪ

★ ಕಾದಂಬರಿ ಬರೆಯಲು ಮೂರು ನಿಯಮಗಳಿವೆ. ಆದರೆ ದುರದೃಷ್ಟವಶಾತ್ ಆ ಮೂರು ನಿಯಮಗಳು ಯಾವುದೆಂದು ಯಾರಿಗೂ ಗೊತ್ತಿಲ್ಲ.
–ಸಾಮರ್‌ಸೆಟ್ ಮಾಮ್

★ ಮನುಷ್ಯ ನಿನಗೇನು ಬೆಲೆಯಿದೆ? ನಿನ್ನ ಮೂಳೆಗಳಿಂದ ಆಭರಣ ಮಾಡಲಾಗದು, ತೊಗಲಿನಿಂದ ಸಂಗೀತ ಉಪಕರಣಗಳನ್ನೂ ಮಾಡಲಾಗದು!
–ಸಂತ ಕಬೀರ